ಶ್ರೀ ಜಯಪ್ರಕಾಶ ಹೆಗ್ಡೆ stagnant waterನಲ್ಲಿ ಗಪ್ಪಿ ಮೀನುಗಳನ್ನು ಹಾಕುವಂಥಹ ವ್ಯವಸ್ಥೆ ಮಾಡಬೇಕು ಏಕೆಂದರೆ ಅದು ಲಾರ್ವ ಅನ್ನು ತಿನ್ನುತ್ತದೆ ಗಪ್ಪಿ ಮೀನುಗಳನ್ನು ತೆಗೆದುಕೊಂಡು ಹೋಗಿ ಸ್ವಲ್ಪ ಡಿಸ್ಟ್ರಿಬ್ಯೂಟ್ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಊ) ವಿಷಯ ಶಿರಹಟ್ಟಿ ಕ್ಷೇತ್ರದಲ್ಲಿ ಮಲೇರಿಯಾ ವ್ಯಾಪಕವಾಗಿ ಹರಡಿರುವ ಬಗ್ಗೆ

ಶ್ರೀ ಎಸ್ ಗಡ್ಡದೇವರ ಮಠ(ಶಿರಹಟ್ಟಿ) ಮಾನ್ಯ ಅಧ್ಯಕ್ಷರೆ, ನನಗೆ ಎರಡೇ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ ಆಗಲೇ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ನಾನು ಬರುವುದು 5 ನಿಮಿಷ ತಡವಾದುದರಿಂದ ನಾನು ಅವಕಾಶವನ್ನು ಕಳೆದುಕೊಂಡೆ ಶಿರಹಟ್ಟಿಯೊಳಗೆ ವರವಿ ಕ್ಷೇತ್ರ ಒಂದು ಪುಣ್ಯ ಕ್ಷೇತ್ರವಾಗಿದ್ದರಿಂದ ಸುಮಾರು ಜನ ಯಾತ್ರಾರ್ಥಿಗಳು ಅಲ್ಲಿಗೆ ಬಂದು ಈಗ ಈಗ ಅದು ಮಲೇರಿಯಾ ಕೇಂದ್ರ ಸ್ಥಾನವಾಗಿದೆ ಸುಮಾರು 40 ವರ್ಷದ ಉದ್ದಕ್ಕೂ ವರವಿ ಯಾತ್ರಾಸ್ಥಳವಾದ್ದರಿಂದ ಜನ ಅಲ್ಲಿ ಅಸ್ವಸ್ಥರಾಗಿ ಮಲೇರಿಯಾ ಸಮಸ್ಯೆ ಕಾಡುತ್ತಿದೆ ಏಪ್ರಿಲ್ ತಿಂಗಳೂ ಬಂತೆಂದರೆ ಅಲ್ಲಿ ಮಲೇರಿಯಾ ಬಂತೆಂದು ಊರು ಬಿಟ್ಟು ಹೋಗುವಂಥಹ ಸಂಧರ್ಭ ಸೃಷ್ಟಿಯಾಗಿದೆ ನಾನು ಇಲ್ಲವೆಂದು ಹೇಳುವುದಾಕ್ಕಾಗುವುದಿಲ್ಲ ಸರ್ಕಾರ ದವರು ಈಗಾಗಲೇ 500 medicated mosquito nets ಕೊಟ್ಟಿದ್ದಾರೆ ಆದರೆ ಅಲ್ಲಿ ಇದ್ದಂತಹ ಜನಸಂಖ್ಯೆಗೆ ಅದು ಸಾಲದಾಗಿದೆ ನಮ್ಮ ಭಾಗದ ಮನೆಗಳ ಪರಿಸ್ಥಿತಿ ನಿಮಗೆಲ್ಲ ಗೊತ್ತಿದೆ ನಮ್ಮಲ್ಲಿ ಇರುವುದು ಜನ ದನ ಒಂದೇಕಡೆ ಇರುವಂಥಹ ಪರಿಸ್ಥಿತಿ ಇದೆ ವಿಶೇಷವಾಗಿ ರೈತಾಪಿ ಜನರು ಇರುವುದರಿಂದ ಹಳ್ಳಿಯ ಸುತ್ತಲೂ ಈಗ 100 ಮೀಟರ್‌ನೊಳಗಡೆ ಸುತ್ತುವರಿದಂತಹ ಒಂದು ಹಳ್ಳ ಆಮೇಲೆ ಅದು ಕಬ್ಜದ ಮೇಲೆ ಡಿಪೆಂಡ್ ಆಗಿರುತ್ತದೆ ಅದರಲ್ಲಿ ವಿಶೇಷವಾಗಿ ಜನಗಳು, ದನಗಳು, ಕೂಡಿಯೇ ಇರುವಂಥಹ ವ್ಯವಸ್ಥೆಯಾಗಿದೆ ಅದಕ್ಕಾಗಿ ಮಲೇರಿಯಾದಿಂದ ಮುಕ್ತಿ ಆಗುತ್ತದೆಯೋ ಅಥವಾ ಇಲ್ಲವೋ ಎನ್ನುವಂಥಹದ್ದು ಇದೆ ಸನ್ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದಿಷ್ಟೇ, ಮಲೇರಿಯಾ ಬಂದಾಗ ಒಮ್ಮೆ ಸರ್ಕಾರವು ಜಾಗ್ರತೆಯನ್ನು ಮಾಡುವಂಥಹ ಕೆಲಸವನ್ನು ನಾವು ಇಲ್ಲಿ

ಮಾಡುತ್ತೇವೆ ಆದರೆ ದುರ್ದೈವದ ಸಂಗತಿ ಏನಾಗಿದೆ ಎಂದರೆ ಬಹಳಷ್ಟು ನಮ್ಮ ಗದಗ್ ಜಿಲ್ಲೆಯಲ್ಲಿ ಮಾಡಿರುವಂಥಹ ಸಂದರ್ಭದೊಳಗಡೆ ಮಲೇರಿಯಾ ಪೀಡಿತ ಹಳ್ಳಿ ಎಂದರೆ ವರವಿ ಒಂದೇ ಈ ಅಂಕಿ ಅಂಶಗಳ ಮೇಲೆ ನೀವು ಜಿಲ್ಲಾವಾರು ತೆಗೆದುಕೊಂಡ ಪ್ರದೇಶದೊಳಗಡೆ 120 ನಮ್ಮ ಗದಗ್ ಜಿಲ್ಲೆಯಿಂದ ರಿಪೋರ್ಟ್ ನಲ್ಲಿರುವುದು 120 ಮಲೇರಿಯಾ ಪೇಷೆಂಟ್ ಇದೆ ಎಂದು ಗುರುತು ಮಾಡಿದರೆ, 120 ಪೇಷೆಂಟ್ಸ್ ವರವಿಯೊಳಗೇ ಇರುತ್ತಾರೆ ಆದರೆ ತಾವು ಜಿಲ್ಲಾವಾರು ಆಲೋಚನೆಯನ್ನು ಮಾಡುವುದಾದರೆ, ನೀವು 1000, 1200 ಬೇರ ಬೇರೆ ಜಿಲ್ಲೆಗಳು ಎಂದು ಸಂಖ್ಯೆಗಳೆಂದು ವಿಚಾರ ಮಾಡಿದಾಗ ಅದು ನೆಗ್ಲಿಜೆನ್ಸ್ ನಂಬರ್ ಆಗಿಬಿಡುತ್ತದೆ ಆ ದೃಷ್ಟಿಯೊಳಗಡೆ ಸತತವಾಗಿ ನಮ್ಮ ಶಿರಹಟ್ಟಿ ತಾಲ್ಲೂಕಿನ ವರವಿ ಗ್ರಾಮ ಅಲಕ್ಷ್ಯಕ್ಕೆ ಒಳಪಟ್ಟಂಥಹ ಪ್ರಸಂಗ ಇಲ್ಲಿ ಇದೆ ಅದಕ್ಕಾಗಿ ನಾನು ಮಾನ್ಯ ಅಧ್ಯಕ್ಷರ ಮುಖೇನವಾಗಿ ಸನ್ಮಾನ್ಯ ಅಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ವಿಶೇಷವಾಗಿ ವರವಿ ಕ್ಷೇತ್ರಕ್ಕೆ ನೀವು ಕೊಟ್ಟಂಥಹ 500 ಸೊಳ್ಳೆಪರದೆಗಳನ್ನು ಕೊಡುವಂಥಹದ್ದನ್ನು ಮಾಡಬೇಕು ಅದಕ್ಕೆ ಶಾಶ್ವತವಾದ ಪರಿಹಾರವನ್ನು ಕೊಡುವುದು ಆಗಬೇಕು ಶಾಶ್ವತ ಪರಿಹಾರವೆಂದರೆ ನೀವು ಕೇಂದ್ರ ತಂಡದವರಾಗಲಿ ರಾಜ್ಯ ತಂಡದವರಾಗಲಿ, ಅಲ್ಲಿ ಒಂದು ಚೆಕ್‌ಡ್ಯಾಂ ನಿರ್ಮಾಣ ಮಾಡುವುದರ ಜೊತೆಗೆ ಶಾಶ್ವತವಾಗಿ ಹಳ್ಳದಲ್ಲಿ ನೀರನ್ನು ನಿಲ್ಲಿಸುವಂತಹದ್ದನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ ಶಾಶ್ವತ ಪರಿಹಾರವನ್ನು ಕಲ್ಪಿಸಿಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ ವರವಿ ಗ್ರಾಮದ 2 ಕಿ ಮೀ ಸುತ್ತಲೂ ನೀರು ಹರಿದು ಮಲೇರಿಯಾ ಬರತಕ್ಕಂಥಹದ್ದಕ್ಕೆ ಸೊಳ್ಳೆಗಳ ನಿರ್ಮಾಣ ವಾಗುವುದಕ್ಕೆ ಕಾರಣವಾಗಿದೆ ತಾವು ನಮಗೆ ಅಭಿನಂದನೆಯನ್ನು ಸಲ್ಲಿಸಬೇಕು ನಾವು ಮೊದಲು ತಮ್ಮ ಏರಿಯಾಕ್ಕೆ ಫ್ರೀ ಸೊಳ್ಳೆಪರದೆಯನ್ನು ಕೊಟ್ಟು ಮಲೇರಿಯಾ ಬರದೇ ಇರುವ ಚಾಲನೆ ಮಾಡಿದ್ದೇವೆ ಆಗಲೇ ನಿಮ್ಮ ವರವಿ ಮತ್ತು ತಾಂಡಗಳು ಏನಿದೆ ಆ ಏರಿಯಾದಿಂದ ಸುಮಾರು 675 ಮಲೇರಿಯಾ ಪ್ರಕರಣಗಳು ವರದಿಯಾಗಿದೆ ಆ ದೃಷ್ಟಿಯಿಂದ ಅಲ್ಲಿಯೇ ಒಂದು ಪರೀಕ್ಷೆ ಮಾಡುವುದು ಹಾಗೂ ಔಷಧಿಯನ್ನು ಕೊಡುವ ಬಗ್ಗೆ ವಿತರಣಾ ಕೇಂದ್ರವನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ

ಅಲ್ಲಿಯ ಗ್ರಾಮಸ್ಥರ ಸಹಾಯವನ್ನು ತೆಗೆದುಕೊಮಡು ಅಲಲಿ ಏನು ಕ್ರಮಗಳನ್ನು ತೆಗೆದಕೊಳ್ಳಬೇಕು ಅದನ್ನು ಮಾಡುತ್ತಿದ್ದೇವೆ ಅದರ ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರಿಗೂ ಕೂಡ ಮನವಿಯನ್ನು ಮಾಡಿದ್ದೇವೆ ಪ್ರತಿ ವರ್ಷವೂ ಅಲ್ಲಿ ನೀರು ನಿಲ್ಲುವುದ ರಿಂದಲೇ ಅಲ್ಲಿ ಸಮಸ್ಯೆಯು ಉದ್ಭವವಾಗುತ್ತಿದೆ ಅಲ್ಲಿ ನಾಲೆ ನೀರು ಸರಾಗವಾಗಿ ಹೋದರೆ ಮಲೇರಿಯಾ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಲ್ಲಿಯ ಸಿ ಇ ಒಗಳ ಜೊತೆಯಲ್ಲಿಯೀ ಕೂಡ ನಾವು ಮಾತನಾಡಿದ್ದೇವೆ ಅವರು ಕೂಡ ನೀರು ನಿಲ್ಲುವುದನ್ನು ತಡೆಗಟ್ಟುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ ಫಾಗಿಂಗ್ ಮೆಷಿನ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ ಹಾಗೂ ಒಂದು ವಾರದೊಳಗೆ ಇಡೀ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಗೂ 5–5 ಫಾಗಿಂಗ್ ಮೆಷಿನ್‌ಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ

ಶ್ರೀ ದಿನೇಶ್ ಗುಂಡೂರಾವ್ ಅಧ್ಯಕ್ಷರೆ, ನನ್ನದೊಂದು ಹಕ್ಕುಚ್ಯುತಿ ಇದೆ

ಅಧ್ಯಕ್ಷರು ನೀವು ಈಗ ಯಾವ ವಿಚಾರ ಪ್ರಸ್ತಾಪ ಮಾಡುತ್ತಿದ್ದಿರಿ?

ಶ್ರೀ ದಿನೇಶ್ ಗುಂಡೂರಾವ್ ಹಕ್ಕುಚ್ಯುತಿ ವಿಚಾರವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ ನಾನು ಹಕ್ಕುಚ್ಯುತಿ ಮಂಡನೆ ಮಾಡಿದ್ದೆ, ತಾವು ಒಪ್ಪಿಕೊಂಡಿದ್ದಿರಿ ಮತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದೀರಿ

ಅಧ್ಯಕ್ಷರು ಆಯಿತು ಪ್ರಸ್ತಾಪ ಮಾಡಿ